ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ, ಪಶುಸಂಗೋಪನೆ ಹಾಗೂ ಮೀನುಗಾರಿಕಾ ಸಚಿವರು).—

ಅ) ಪ್ರಸ್ತುತ ಅನುಷ್ಠಾನದಲ್ಲಿರುವ ಭಾರತ-ಡೆನ್ಮಾರ್ಕ್ ಮೀನುಗಾರಿಕೆ ಯೋಜನೆ ಅಡಿಯಲ್ಲಿ ೫೦೦ ಮೀನುಗಾರರ ಕುಟುಂಬಗಳಿಗೆ ವಸತಿ ಸೌಕರ್ಯ ಕಲ್ಪಿಸಲು ಯೋಜಿಸಲಾಗಿದೆ. ಇತ್ತೀಚೆಗೆ ಕೇಂದ್ರ ಸರ್ಕಾರ ರೂಪಿಸಿರುವ ರಾಷ್ಟ್ರೀಯ ಮೀನುಗಾರರ ಕ್ಷೇಮಾಭಿವೃದ್ಧಿ ನಿಧಿ ಯೋಜನೆಯಿಂದ ಪಣಂಬೂರಿನಲ್ಲಿ ಕರಾವಳಿ ಪ್ರದೇಶ ಮತ್ತು ಒಳನಾಡು ಮೀನುಗಾರರಿಗೆ ವಸತಿ ಸೌಕರ್ಯ ಕಲ್ಪಿಸಲು ಉದ್ದೇಶಿಸಲಾಗಿದೆ.

ಆ) ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಜಿ.ಎಸ್. ಆಚಾರ್.—ಮಾನ್ಯ ಅಧ್ಯಕ್ಷರೆ, ಆ ಪ್ರಶ್ನೆಯನ್ನು ಕೇಳುವಾಗ ಸ್ವಲ್ಪ ವಿವರಗಳನ್ನು ಅಪೇಕ್ಷಿಸಿದ್ದೆ. ಅದು ಬಂದಿಲ್ಲ. ಈ ಯೋಜನೆಯ ಪ್ರಕಾರ ಹೌಸಿಂಗ್ ಕಮಿಷನರ್‌ರವರು ಮೀನುಗಾರಿಕಾ ಇಲಾಖೆಗೆ ಕೊಟ್ಟ ಆದೇಶದ ಪ್ರಕಾರ ಎಲ್ಲಿ ಸರಕಾರದ ಜಾಗವಿದೆ, ಅಲ್ಲಿ ಮಾತ್ರ ಹೌಸಿಂಗ್ ಕಾಲೋನಿ ಮಾಡಬಹುದೆಂದೂ ಇದೆ ತಮಗೂ ಗೊತ್ತಿರಬಹುದು, ಕರಾವಳಿ ಪ್ರದೇಶದಲ್ಲಿ ಸರಕಾರಿ ಜಾಗಗಳು ಇಲ್ಲ. ಮೀನುಗಾರರಿಗೆ ವಸತಿಯನ್ನು ಸಮುದ್ರ ತೀರದಲ್ಲಿ ಮಾಡಬೇಕಾಗುತ್ತದೆ. ಅವರ ಸ್ವಂತ ಜಾಗ ಏನಿದೆ, ಲ್ಯಾಂಡ್ ರಿಫಾರ್ಮ್‌ನಿಂದ ೫-೧೦ ಸೆಂಟ್ ಬಂದಿದೆ. ಒಂದೇ ಮೀನುಗಾರರ ಕಾಲೋನಿಯನ್ನು ಮಾಡಲಿಕ್ಕೆ ಸಾಧ್ಯವಿದೆಯೇ ? ನಿಯಮಾವಳಿಗಳಲ್ಲಿ ಏನಾದರೂ ತಿದ್ದುಪಡಿ ಮಾಡಲಿಕ್ಕೆ ಸಾಧ್ಯವೇ ? ಏನಾದರೂ ಮಾಡುತ್ತೀರಾ ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ.—ರಾಷ್ಟ್ರೀಯ ಮೀನುಗಾರರ ಕ್ಷೇಮಾಭಿವೃದ್ಧಿ ನಿಧಿ ಯೋಜನೆಯಿಂದ ಮೀನುಗಾರರಿಗೆ ವಸತಿ ಕಲ್ಪಿಸಲು ಉದ್ದೇಶಿಸಲಾಗಿದೆ. ಅದೇ ರೀತಿ ಅವರು ಸ್ವಂತ ಜಾಗದಲ್ಲಿ ಮನೆ ಕಟ್ಟಬೇಕೆಂದು ಒತ್ತಾಯ ಮಾಡಿದ್ದಾರೆ. ಸರ್ಕಾರ ಪರಿಶೀಲನೆ ಮಾಡುತ್ತಿದೆ.

ಪ್ರಶ್ನೆ ೧೬೪ (೧೯೧)

(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

ರಾಜ್ಯದಲ್ಲಿರುವ ವಿದ್ಯುತ್ ಮಗ್ಗಗಳ ಬಗ್ಗೆ

೧೬೪(ಡಿ). ಶ್ರೀ ಜಿ. ರಾಜಗೌಡ (ಹನೂರು).—ಮಾನ್ಯ ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಎಷ್ಟು ವಿದ್ಯುತ್ ಮಗ್ಗಗಳಿವೆ ?

ಆ) ವರ್ಷದಲ್ಲಿ ಸುಮಾರು ಎಷ್ಟು ಕಚ್ಚಾ ರೇಷ್ಮೆಯನ್ನು ಬಳಸುತ್ತವೆ.

ಇ) ಕೇಂದ್ರ ಸರ್ಕಾರದ ಜವಳಿ ನೀತಿಯಿಂದ ಹಾಗೂ ವಿದ್ಯುತ್ ಮಗ್ಗಗಳ ನಿಲುಗಡೆಯಿಂದ ರಾಜ್ಯದ ಎಷ್ಟು ಜನ ನೇಕಾರರಿಗೆ, ಕಾರ್ಮಿಕರಿಗೆ, ಬಣ್ಣ ಹಾಕುವವರಿಗೆ, ಹುರಿಕಾರರ ಜೀವನಕ್ಕೆ ತೊಂದರೆಯಾಗಿದೆ.

ಈ) ಮಗ್ಗಗಳ ನಿಲುಗಡೆಯಿಂದ ರಾಜ್ಯದಲ್ಲಿ ರೇಷ್ಮೆ ಬೆಲೆ ಇಳಿಮುಖವಾಗಿ ಈ ಉದ್ಯಮಕ್ಕೆ ತೊಂದರೆಯಾಗುವುದಿಲ್ಲವೆ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ರಾಜ್ಯದಲ್ಲಿ ಒಟ್ಟು ೪೭,೯೫೧ ವಿದ್ಯುತ್ ಮಗ್ಗಗಳಿವೆ.

ಆ) ಸುಮಾರು ೩೯,೬೦,೦೦೦ (ಮೂವತ್ತೊಂಬತ್ತು ಲಕ್ಷ ಅರವತ್ತು ಸಾವಿರ) ಕೆ.ಜಿ.ಯಷ್ಟು.

ಇ) ಕೇಂದ್ರ ಸರ್ಕಾರದ ಆದೇಶ ಸಂಖ್ಯೆ ಡಿಸಿಪಿಚ್ ೧೭/(೫-ಆರ್)/೮೫ ಇ ಅಂಡ್ ಎಸ್, ದಿನಾಂಕ ೧೧-೩-೮೬ರಲ್ಲಿ ಕೆಲವು ಬಗೆಯ ವಸ್ತ್ರಗಳನ್ನು ಕೈಮಗ್ಗಗಳ ಮೂಲಕ ಉತ್ಪಾದಿಸಲು ಮೀಸಲಿಟ್ಟಿದ್ದರು. ತದನಂತರ ಆದೇಶ ಸಂಖ್ಯೆ ಡಿಸಿಪಿಚ್/೫ ಎನ್ ಎಫ್/೧(೨)/೮೬ ದಿನಾಂಕ ೬-೮-೧೯೮೬ರಲ್ಲಿ ದಿನಾಂಕ ೧೧-೩-೮೬ರ ಹಿಂದಿನ ಆದೇಶವನ್ನು ತಿದ್ದುಪಡಿ ಮಾಡಿ, ರದ್ದು ಮಾಡಲು

ಯೋಗ್ಯವಾದಂತಹ ಶುದ್ಧವಾದ ರೇಷ್ಮೆಯ ವಸ್ತ್ರಗಳನ್ನು ಮತ್ತು ಇತರೆವಸ್ತ್ರಗಳಿಗೆ ರಿಯಾಯಿತಿಯನ್ನು ನೀಡಿರುತ್ತಾರೆ. ಈ ತಿದ್ದುಪಡಿಯ ಸಾಧಕಬಾಧಕಗಳನ್ನು ಇನ್ನೂ ಪರಿಶೀಲಿಸಲಾಗುತ್ತಿದೆ.

ಈ) ಇಲ್ಲ.

ಶ್ರೀ ಜಿ. ರಾಜೂಗೌಡ —ಇದಕ್ಕೆ ಸಂಬಂಧಪಟ್ಟ ಹಾಗೆ ಕೇಂದ್ರ ಸರ್ಕಾರದವರು ಎರಡು ಆಜ್ಞೆಯನ್ನು ಹೊರಡಿಸಿದ್ದಾರೆ. ಅದರಲ್ಲಿರತಕ್ಕಂತಹ ವ್ಯತ್ಯಾಸವೇನು ? ಕೇಂದ್ರ ಸರ್ಕಾರದ ಆಜ್ಞೆಯಿಂದ ಏಕಕಾಲದಲ್ಲಿ ಕೈಮಗ್ಗ ಹಾಗೂ ವಿದ್ಯುತ್ ಮಗ್ಗಗಳನ್ನು ರಕ್ಷಣೆ ಮಾಡಲಿಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ಜೆ. ಹೆಚ್. ಪಟೀಲ್.—ಕೇಂದ್ರ ಸರ್ಕಾರದ ಎರಡು ಆಜ್ಞೆಗಳ ವ್ಯತ್ಯಾಸವನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಮೊದಲು ಸಿಲ್ಕಿನ ಯಾರ್ನಿಗೆ ಫ್ಯಾಬ್ರಿಕ್ಸ್ ಅನ್ನು ಹ್ಯಾಂಡ್ ಲೂಂಗಳಿಗೆ ಮಾತ್ರ ಮಾಡಬೇಕೆಂದು ಹೇಳಿದ್ದರಿಂದ ಪವರ್ ಲೂಮ್ಸ್‌ಗಳಿಗೆ ಅಫೆಕ್ಟ್ ಆಯಿತು. ಪವರ್ ಲೂಮ್ಸ್‌ನವರು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡ ಮೇಲೆ ಈಗ ಕನ್‌ಸೆಷನ್ ಕೊಟ್ಟಿರುತ್ತಾರೆ. ಅಲ್ಲದೆ ಕೆಲವು ಪವರ್ ಲೂಮ್ಸ್‌ನವರು ರಿಟ್ ಹಾಕಿ ಸ್ಟೇ ತಂದಿರುವುದರಿಂದ ಮೊದಲಿನ ಸ್ಥಿತಿ ಈಗ ಇದೆ.

ಶ್ರೀ ಜಿ. ರಾಜೂಗೌಡ.—ವಿಶೇಷ ರೀತಿಯ ಸೀರೆ, ಧೋತಿ ಮತ್ತು ಅಂಚು ಇರುವ ಸೀರೆ, ಪಸಿರು ಧೋತಿ ಮುಂತಾದ ೨೨ ಉತ್ಪನ್ನಗಳನ್ನು ಕೈಮಗ್ಗಕ್ಕೆ ಮೀಸಲಿಟ್ಟಿರುವುದರಿಂದ ಪವರ್ ಲೂಮ್ಸ್‌ಗಳಿಗೆ ತೊಂದರೆಯಾಗುವುದಿಲ್ಲವೇ ? ೪,೧೮೦ ಟನ್ ರೇಷ್ಮೆಯಲ್ಲಿ ೧,೩೫೦ ಟನ್ ರೇಷ್ಮೆ ವಿದ್ಯುತ್ ಮಗ್ಗಗಳಿಗೆ ಬಳಕೆಯಾಗುತ್ತದೆ. ಇದರಿಂದಾಗಿ ರೇಷ್ಮೆ ಕೃಷಿಗೆ ಪೆಟ್ಟು ಬೀಳುತ್ತದೆ. ನಮ್ಮ ರಾಜ್ಯದಲ್ಲಿನ ರೇಷ್ಮೆ ಕೃಷಿಗೆ ತೊಂದರೆಯಾಗುತ್ತದೆ.

ಶ್ರೀ ಜೆ. ಹೆಚ್. ಪಟೀಲ್.—ತೊಂದರೆಯಾಗುತ್ತವೆ. ಇದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದೇವೆ.

ಶ್ರೀ ಜೆ.ಎಸ್. ದೇಶಮುಖ್ (ಮಾನ್ಯ ಅರಣ್ಯ, ಗಡಿ ಪ್ರಾಗಾ ಭೂವಿಜ್ಞಾನ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ...

ಶ್ರೀಮತಿ ಮುಕ್ತರುನ್ನೀಸ ಬೇಗಂ.—ನನಗೆ ಉತ್ತರ ಬಂದಿಲ್ಲ. ಕ್ಲಾರಿಫಿಕೇಷನ್ ಕೇಳಲು ತೊಂದರೆಯಾಗುತ್ತದೆ. ಉತ್ತರ ಕೊಡಿ ಕೊನೆಯಲ್ಲಿ ಮಾತನಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಪ್ರಿಂಟ್ ಮಾಡಿದ ಉತ್ತರ ನಿಮಗಿಲ್ಲವೆಂದರೆ ಸಪ್ಲಿಮೆಂಟರಿ ಕೇಳಲು ತೊಂದರೆಯಾಗುತ್ತದೆ.

ಶ್ರೀಮತಿ ಮುಕ್ತರುನ್ನೀಸ ಬೇಗಂ.—ಈ ಪ್ರಶ್ನೆಯನ್ನು ಕೊನೆಯಲ್ಲಿ ತೆಗೆದುಕೊಳ್ಳಿ.

ಪ್ರಶ್ನೆ ೧೬೭ (೬೩೫)

(ಮಾನ್ಯ ಸದಸ್ಯರು ಗೈರು ಹಾಜರು)

ಗ್ರಾಮಾಂತರ ಪ್ರದೇಶಗಳಿಗೆ ದೀಪದ ಸಾಲಭ್ಯದ ಬಗ್ಗೆ

೪೪. ಶ್ರೀ ಜಿ. ರಾಮದಾಸ್, —ಮಾನ್ಯ ವಿದ್ಯುತ್ ಮತ್ತು ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಂಪಸಾಗರ ತಾಲ್ಲೂಕಿನಲ್ಲಿ ವಿದ್ಯುತ್ಶಕ್ತಿಯಿಂದ ಗ್ರಾಮಾಂತರ ಪ್ರದೇಶಗಳಿಗೆ ದೀಪದ ಸೌಲಭ್ಯ ಕಲ್ಪಿಸಲು ಮಂದಗತಿಯಿಂದ ಕೆಲಸವಾಗುತ್ತಿರುವುದಕ್ಕೆ ಕಾರಣಗಳೇನು ?

ಆ) ಅತ್ಯಂತ ಹಿಂದುಳಿದಿರುವ ಮಾಡದಕೆರೆ ಹೋಬಳಿಯಲ್ಲಿ ಇನ್ನೂ ಅನೇಕ ಗ್ರಾಮಗಳಿಗೆ ವಿದ್ಯುತ್ ಸೌಲಭ್ಯ ಪೂರೈಸದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಕಳೆದ ಎರಡು ವರ್ಷಗಳಿಂದ ತಾಲ್ಲೂಕಿನ ಎಷ್ಟು ಗ್ರಾಮಗಳಿಗೆ ವಿದ್ಯುತ್ ಸೌಲಭ್ಯವನ್ನು ನೀಡಲಾಗಿದೆ.